Regd No M 1299 34 th Year ಶಾ|| 16—6—51

SATYAVADI

ಸತ್ಯವಾದಿ

ಸಂಪಾದಕರು- ಆದಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು | ಬಿಡಿ ಪ್ರತಿ 3 ಪೈ

ಅವ್ಯವಸ್ಥಿತ ಆಡಳಿತದ ಫಲ

ಅನ್ನ ಬಟ್ಟೆ ವಸತಿ ನಿರಾಶ್ರಿತರ ಸಮಸ್ಯೆ ಕಾಂಗ್ರೆಸ್ ಸರ್ಕಾರಗಳ ಅವ್ಯವಸ್ಥಿತ ಆಡಳಿತ ಫಲವಾಗಿ ವಿಷಮಿಸಿದೆಯೆಂದು ಉತ್ತರ ಪ್ರದೇಶ ಪ್ರಜಾ ಕಾಂಗ್ರೆಸಿನ ಧುರೀಣ ಶ್ರೀ ದತ್ತ ಪಲಿವಾಲ್ ಪಾಟ್ನದಲ್ಲಿ ತಿಳಿಸಿದ್ದಾರೆ.

ಹೊಸಪಕ್ಷದ ಮೊದಲ ಕೆಲಸ

ಭಾರತದಲ್ಲಿರುವ ಕಾಳಸಂತೆಕೋರರ ತಂಡವನ್ನು ಇತರ ಘಾತಕರನ್ನೂ ಮೊಕದಮ್ಮೆ ಮಟ್ಟಾಹಾಕಬೇಕೆಂದು ಆಚಾರ್ಯ ಕೃಪಾಲಿನಿಯವರ ಪಕ್ಷದ ಸಂಮೇಳನದಲ್ಲಿ ನಿನ್ನೆ ಘೋಷಿಸಲಾಯಿತು. ರಾಜಕೀಯ ಸಮಿತಿ ಸಭೆ ನಡೆದಾಗ ಸಚಿವ ಖಫಿ ಅಹಮದ್ ಕಿದ್ವಾಯಿ ವೇದಿಕೆಯ ಮೇಲೆ ಮಂಡಿಸಿದ್ದರೆಂದು ಪಾಟ್ನ ವಂದಿ

ಮಾಲೀಕನ ಮರಣ

ಶ್ರೀಮತಿ ವೈಜಯಂತಿ ಮಾಲಾರವರ ಪಾರ್ಟಿಯ ಪಡೆದ ಸತೀಪ್ ಬಸ್ ಸರ್ವಿಸ್ ಚಳ್ಳಕೆರೆಗೆ ೫ ಮೈಲಿ ದೂರದಲ್ಲಿ ಆ ಪಘಾತಕ್ಕೀಡಾಗಿ ಒಸ್ ಮಾಲೀಕ ಶ್ರೀ ರಾಮಯ್ಯರೆಡ್ಡಿ ಎಂಬವರು ಸ್ಥಳದಲ್ಲಿಯೇ ನಿಧನರಾದರು.

ಮುಂದಿರುವ ಮಹಾ ಸಮಸ್ಯೆ

ಜನಸಂಖ್ಯೆ ತಡೆಗಟ್ಟುವದೇ ಭಾರತದ ಮುಂದಿರುವ ಮಹಾ ಸಮಸ್ಯೆ — ಎಂದು ಸರ್. ಎಂ. ವಿಶ್ವೇಶ್ವರಯ್ಯನವರು ಮೊನ್ನೆ ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಬಂಧಿಸಲ್ಪಟ್ಟರು

ಬಹು ಸಂಖ್ಯಾಕ ಸಮಾಜದ ಧಾರ್ಮಿಕ ಭಾವನೆಯನ್ನು ನೋಯಿಸುವ ಅನೇಕ ಲೇಖನಗಳನ್ನು ಪ್ರಕಟಿಸಿದ್ದಕ್ಕಾ ಇರಲು ಇಲ್ಲಿಯ ಉರ್ದು ಪತ್ರಿಗೆಯೊಂದರ ಸಂಪಾದಕರಾದ ಮುತಾರ್ಜಾ ಮಜತೇಡಿ ಎಂಬವರು ಹೈದರಾಬಾದಿನಲ್ಲಿ ಬಂಧಿಸಲ್ಪಟ್ಟಿದ್ದಾರೆ.

— ಬೆಂಗಳೂರು ಅಲ್ ಬಾಗಿಸಲ್ಲಿರುವ ಸಾರ್ವಜನಿಕ ಮನೆಯಲ್ಲಿ ಭಾರತ ಕಾಂಗ್ರೆಸ್ ಸೇವಾನೇಕಗೊಳ್ಳಲಿದೆಯೆಂದು ಸೊತ್ತಾ ಹೇಳಿದೆ.

೩ ಲಕ್ಷ ಬೇಲು ಬಟ್ಟೆ ಸರಬರಾಜು

ಮದ್ರಾಸು ಲಕ್ಷ ಬೇಲು ಬಟ್ಟೆ ನಾನಾ ಪ್ರಾಂತಗಳಿಗೆ ಹೋಗಲಿದೆ ಜುಲೈ 1 ನೆ ಸಾಲಾದ ಹೊತ್ತಿಗೆ ಕೊಳ್ಳುವವರಿಗೆ ತುಂಬ ಬಟ್ಟೆ ಸಿಗುವದೆಂದು ಸಚಿವ ಮೆಹತಾಬ್ ಬೊಂಬಾಯಿನಲ್ಲಿ ತಿಳಿಸಿದ್ದಾರೆ.

ಮುಖ್ಯ ಸಚಿವನಿಗೆ ಮೂವಿನಹಣ್ಣು

ಇಂದೂರು : ಮೂವಿನಹಣ್ಣುಗಳಿವೆ ಎಂದು ಬರೆಯಲ್ಪಟ್ಟ ಖಾಲಿ ಪಾರ್ಸಲ್ಲೊಂದನ್ನು ಮಧ್ಯಭಾರತದ ಮುಖ್ಯ ಮಂತ್ರಿ ಶ್ರೀ ಘಕತಮಲ್ ಜೈನರು ಸ್ವೀಕರಿಸಿದರು ಈ ಪಾರ್ಸಲ್ಲು ಅವರ ಪುತ್ರಿಯು ಮತ್ರೊಬ್ಬರಿಂದ ಕಳಿಸಲ್ಪಟ್ಟಿದ್ದಿತು. ಪುತ್ರಿಯ ವಿತ್ತರು ಮಾಲ್ಕ ಡಜ್ ಹಣ್ಣುಗಳನ್ನು ಕಳಿಸಿದ್ದಾದರೂ ಮಂತ್ರಿಗಳು ಒಂದೇ ಒಂದು ಹಣ್ಣನ್ನು ಪಡೆದರು.

ಗೋಧಿ ಸ್ವೀಕರಿಸುವರು

ಒಮ್ಮನ ಮಂಗಳವಾರ ಭಾರತದ ರಾಯಭಾರಿ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಫಿಲಿಡೆಲ್ಫಿಯಾದಲ್ಲಿ ಸಾಂಕೇತಿಕವಾಗಿ ಧಾನ್ಯ ಸ್ವೀಕರಿಸುವರು ಅಂದೇ ಹತ್ತು ಸಹಸ್ರ ಟನ್ ಧಾನ್ಯ ಅಲ್ಲಿಂದ ಭಾರತಕ್ಕೆ ಹೊರಡುವದು. ಅಲ್ಲಿಗೆಹೋಗಲು ನಮ್ಮ ರಾಯಭಾರಿಗೆ ವಿಶೇಷ ವಿಮಾನ ಕಳಿಸಲಾಗಿದೆ.

ವಿವಾಹಮಹೋತ್ಸವ

ಶ್ರೀ ಎಂ. ಎಸ್. ಬಸವರಾಜಯ್ಯನವರ ಮಗಳು ಚಿ|| ಸೌ|| ಜಗದೀಶ್ವರಿ ಮತ್ತು ಶ್ರೀ ಶಂಭುಲಿಂಗಪ್ಪನವರ ಮಗ ಚಿ| ಎಂ. ಸಂಜುಂಡಸ್ವಾಮಿ ಇವರ ವಿವಾಹ ಮಹೋತ್ಸವ ಮೊನ್ನೆ ವಿಜೃಂಭಣೆಯಿಂದ ನೆರವೇರಿತು. ನಿನ್ನೆ ದಿನಸ ಸಂಜೆ ಶ್ರೀಮತಿ ವೈಜಯಂತಿ ಮಾಲಾರವರ ಸಂಗೀತ ಮತ್ತು ಚಿತ್ರಗೀತೆ ಏರ್ಪಾಟಾಗಿತ್ತು. ಈ ದಿನ ಟೀ ಏರ್ಪಡಿಸಲಾಗಿದೆ

— ಮಹಾ ಚುನಾವಣೆ ಹೈದರಾಬಾದಿನಲ್ಲಿ ಜನವರಿಯಲ್ಲಿ ಜರಗಬೇಕೆಂಬ ಸೂಚನೆ ಹೊಂಟಿದೆ.

ಕಿಸಾನ್ ಮಜದೂರ ಪ್ರಜಾಪಕ್ಷ

ರಚನೆಯಾಯಿತು

ಪಾಟ್ನ — ಕಿಸಾನ್ ಮಜದೂರ್ ಪ್ರಜಾಪಕ್ಷ ಎಂಬ ಹೆಸರಿಡಲು ಆಚಾರ್ಯ ಕೃಪಾಲಿನಿ ಮತ್ತು ಅವರ ಸಂಗಡಿಗರು ಹೊಸ ರಾಜಕೀಯ ಪಕ್ಷಕ್ಕೆ ನಾಮಕರಣ ಮಾಡಲು ನಿರ್ಧರಿಸಿದ್ದಾರೆ. ಕಾಂಗ್ರೆಸ್ ಎಂಬ ಹೆಸರು ಸೇರಿಸಲು ಅಥವಾ ಬಿಡಲು ವಿಷಯ ನಿಯಾಮಕ ಸಮಿತಿಗೆ ಬಿಡಲು ನಿರ್ಧರಿಸಲಾಗಿದೆ.

× ನೇಪಾಳಕ್ಕೆ ಪಂ|| ನೆಹರು ಹೋಗುವ ಬಗೆಗೆ ಅಲ್ಲಿ ಸ್ವಾಗತಕ್ಕೆ ಏರ್ಪಾಟಾಗುತ್ತಿದೆ.

ಸಮಾಜವಾದಿಗಳ ವರ್ತನೆ ಬಗೆಗೆ ಖಂಡನೆ

ಅಖಿಲ ಕರ್ನಾಟಕ ಹಿಂದೂ ಮಹಾಸಭೆ ಅಧ್ಯಕ್ಷರಾದ ಶ್ರೀ ಮಲ್ಲಪ್ಪನವರು ಕಾಗೋಡು ಸತ್ಯಾಗ್ರಹ ಬಗ್ಗೆ ಹೇಳಿಕೆಯೊಂದನ್ನಿತ್ತು, ಸಮಾಜವಾದಿಗಳ ವರ್ತನೆ ಬಗ್ಗೆ ತೀವ್ರ ಖಂಡನೆ ವ್ಯಕ್ತಪಡಿಸಿರುವದಾಗಿ ಸಾಗರ ವಾರ್ತೆ.

× ಭಾರತಕ್ಕೆ ಆಹಾರ ಕಳಿಸುವ ಮಸೂದೆಗೆ ಟ್ರೂಮನ್ನರು ನಿನ್ನೆ ರುಜು ಹಾಕಿದರೆಂದು ವಾಷಿಂಗ್ಟನ್ನಿನ ವಾರ್ತೆ. ಅಲ್ಲಿಂದ ಪ್ರತಿವರ್ಷ 2 ಲಕ್ಷ ಟನ್ನು ಧಾನ್ಯ ಭಾರತಕ್ಕೆ ಬರುವದು.

× ಹಿಂದೂಧರ್ಮ ಹಿರಿಮೆ ಬಗ್ಗೆ ಉಪನ್ಯಾಸ ಕೊಡಲು ಶ್ರೀ ದೊರೆ ಸ್ವಾಮಿ ಶಾಸ್ತ್ರಿಗಳು ಅಮೇರಿಕಕ್ಕೆ ಸ್ಟೀಂಶ ತೆರಳುವರು. ಭಾರತ ಸರ್ಕಾರ ಪರ ಅವರು ಹೋಗಲು ನಿರಾಕರಿಸಿದರು.

ವಿವಾಹಮಹೋತ್ಸವ

ಶ್ರೀ ವಸುದಾ ಶಿರಾವ್ ರವರ ಮಗಳು ಚಿ|| ಸೌ|| ಚಂದ್ರಾವತಿ ಮತ್ತು ಶ್ರೀ ವೆಂಕಟರಾಯಪ್ಪನವರ ಮಗ ಚಿ|| ಎ ನನರತ್ನ ಇವರ ವಿವಾಹ ಮಹೋತ್ಸವ ಮತ್ತು ಸಾಂಗ್ಲಿಯ ಶ್ರೀ ತಾಡ್ಯ ಸಾಹೇಬ್ ಅರವಾಡೆಯವರ ಮಗಳು ಚಿ|| ಸೌ|| ತ್ರಿಶಲಾ ದೇವಿ ಮತ್ತು ಶ್ರೀ ಪಸುಪಾಲರಾವ್‌ರವರ ಮಗ ಚಿ|| ಸನತ್ಕುಮಾರ್ ಇವರ ವಿವಾಹಮಹೋತ್ಸವ ಮೊನ್ನೆ ವಾಣೀವಿಲಾಸಪುರಂನಲ್ಲಿ ವೈಭವದಿಂದ ನೆರವೇರಿತು.

ಕಾಗೋಡು ಕಂಡರು

ಮೈಸೂರು ಸಂಸ್ಥಾನ ಹಾಗೂ ಕರ್ನಾಟಕ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಎಂ ಸ್ಯ ಮಲ್ಲಪ್ಪನವರು ಕಾಗೋಡು ಸತ್ಯಾಗ್ರಹ ಪರಿಸ್ಥಿತಿ ಪರಿಶೀಲಿಸಿದರು.

ಲೋಹಿಯಾರ ದಸ್ತಗಿರಿ

ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದರೆಂದು ಭಾರತ ಸಮಾಜವಾದಿ ಪಕ್ಷದ ಮುಂದಾಳು ಡಾ| ಲೋಹಿಯಾರವರು ಬಂಧಿಸಲ್ಪಟ್ಟರು. ಅವರೊಡನೆ 2 ಸಹಸ್ರ ಮಂದಿ ಬಂಧಿತರಾಗಿದ್ದರು.

ಆಕಸ್ಮಿಕ ಘಟನೆ

ಸಿನಿಮಾ ನಟಿ ಶಾಮರ ಸಾವು ಆಕಸ್ಮಿಕವೆಂದು ಬೊಂಬಾಯಿ ಕೋರ್ಟು ತೀರ್ಪಿತ್ತಿದೆ.

ನಿರ್ಬಂಧ ವಿಧಿಸಲಾಗಿದೆ

ಬೊಂಬಾಯಿನ ಒಳಾಡಳಿತ ಸಚಿವ ಶ್ರೀ ಮುರಾರ್ಜಿ ದೇಸಾಯಿ ಹೇಳಿಕೆ ಇತ್ತು ಕುದುರೆ ಜೂಜು ಬುಕ್ಕಿಗಳ ಮೇಲೆ ಹೊಸ ನಿರ್ಬಂಧ ವಿಧಿಸುವದಾಗಿ ತಿಳಿಸಿರುವರು.

ನಿವೃತ್ತಿ

ಇದೇ ತಾ|| 21 ರಿಂದ 6 ತಿಂಗಳ ವರೆಗೆ ರಜಾ ಅನುಭವಿಸಿ ಅನಂತರ ರಿವಿಸ್ಯೂ ಕಮಿಷನರ ಕೆಲಸದಿಂದ ಶ್ರೀ ವಿ. ವೇದವ್ಯಾಸಾಚಾರ್ಯರು ನಿವೃತ್ತರಾಗುವ ಪಾಗಿ ಸರ್ಕಾರಿ ಪ್ರಕಟಣೆ

ಬೆಂಬಿದ್ದಿದ್ದರು

ಈ ನಾಲ್ಕು ವರ್ಷಗಳಲ್ಲಿ ಆಚಾರ್ಯ ಕೃಪಾಲಿನಿ ಎಲ್ಲೆಲ್ಲಿ ಭಾಷಣ ಮಾಡಿದರೋ ಅಲ್ಲೆಲ್ಲ ಸಿ ಐ. ಡಿ. ಗಳು ಬೆನ್ನು ಬಿದ್ದಿದ್ದರೆಂದು ಪಾಟ್ನದಲ್ಲಿ ಕೃಪಾಲಿನಿ ತಿಳಿಸಿರುವರು.

ಪೆಹ್ರುಗಳ ಸಂತೋಷ

ಪ್ರಧಾನಿ ನೆಹರು ಪ್ರಕಟಣೆ ಹೊರಡಿಸಿ ಆಹಾರ ಧಾನ್ಯ ಮಸೂದೆ ಅಮೇರಿಕಾ ಕಾಂಗ್ರೆಸಿನಲ್ಲಿ ಅಂಗೀಕೃತವಾದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಅಬ್ದುಲ್ಲ ಗಫಾರ್ ಖಾನ್

ಮಾಂಟ್ಗೋಮರಿ ಬಂದೀಖಾನೆಯಿಂದ ಕಾವಲ್ಪಿಂಡಿ ಸೆಂಟ್ರಲ್ ಜೈಲಿಗೆ ಗಡಿ ಪಾಡು ಗಾಂಧಿಯನ್ನು ಕಳಿಸಲಾಗಿದೆ.

ಸೋಮನಾಥ ಜೀರ್ಣೋದ್ಧಾರ ಕುರಿತು ಕ್ರೈಸ್ತ ಪ್ರತಿಕ್ರಿಯೆ

ಸೋಮನಾಥ ದೇವಾಲಯದ ಜೀರ್ಣೋದ್ಧಾರದ ಕುರಿತು ಪಾಕಿಸ್ತಾನವು ನಿಷೇಧಾತ್ಮಕ ಪ್ರಚಾರ ಕೈಕೊಳ್ಳುತ್ತಿರುವುದರ ಕುರಿತು ಪ್ರೇರೇಪಣೆ ಹೊಂದಿ ತಿರುವಾಂಕೂರು - ಕೊಚ್ಚಿ ಸಂಸ್ಥಾನದ ಕ್ರೈಸ್ತ ಜಾತೀಯ ಸಂಸ್ಥೆಗಳೂ ಸೋಮನಾಥ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ಭಾಗವಹಿಸಿದ ಡಾ|| ರಾಜೇಂದ್ರ ಪ್ರಸಾದ ವಹಿಸಿದ ಇತರ ಭಾರತೀಯ ರಾಷ್ಟ್ರೀಯ ಮುಖಂಡರ ವಿರುದ್ಧ ತೀವ್ರ ಟೀಕಾತ್ಮಕ ಅಪಪ್ರಚಾರಕ್ಕೆ ತೊಡಗಿದುದು ಕಂಡುಬಂದಿದೆ. ಇತ್ತೀಚೆಗೆ ಆಲ್ವೇಯಲ್ಲಿ ಜರುಗಿದ ಕೆಥೊಲಿಕ್ ಕಾಂಗ್ರೆಸ್ ವಾರ್ಷಿಕೋತ್ಸವವನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ವಿ|| ಎಸ್. ಎ ಜೋಸೆಫರು, ' ಹಿಂದೂಗಳು ತಿರುಗಿ ಹಿಂದೂರಾಜ್ಯ ಸ್ಥಾಪಿಸುವ ಯತ್ನದಲ್ಲಿ ತೊಡಗಿರುವರೆಂಬುದಕ್ಕೆ ಸೋಮನಾಥನ ಕಡೆಗೆ ದೃಷ್ಟಿ ಸರಿದಂತಾಯಿತ. ಒಂದು ಸಾವಿರ ವರ್ಷಗಳಿಗೆ ಮೇಲ್ಪಟ್ಟು ಹಿಂದೂಗಳು ಪರಕೀಯರ ಅಳ್ವಿಕೆಯಡಿಯಲ್ಲಿ ಗುಲಾಮಗಿರಿಯ ಜೀವನ ನಡೆಸಿಕೊಂಡಿದ್ದರು. ಘಜನಿ ಮಹಮ್ಮದನಿಂದ ಬಹಳ ಕಾಲದ ಹಿಂದೆ ವಿನಾಶಕ್ಕೆ ಗುರಿಯಾದ ಸೋಮನಾಥ ದೇವಾಲಯವು ಆಗ ಅವರ ಸ್ಮರಣೆಯಲ್ಲಿ ರಲಿಲ್ಲ. ಆದರೆ ಭಾರತವು ಸ್ವಾತಂತ್ರ್ಯ ಹೊಂದುತ್ತಲೇ, ಪಟೇಲ್, ಮುನಷಿ ಮತ್ತು ಇತರ ಮುಖಂಡರ ದೃಷ್ಟಿ ಒಂದೇ ಸವನೆ ಸೋಮನಾಥದ ಕಡೆಗೆ ತಿರುಗಿತು ' ಎಂದು ವಾಗ್ಬಾಣ ಹೂಡಿದರು



ನ್ಯೂಯಾರ್ಕ್ ನಗರ ಭವನ — ಮೇಯರ್‌ರು ಅಮೇರಿಕಾಕ್ಕೆ 14 ವರ್ಷಗಳ ಸುದೀರ್ಘ ಭೇಟಿಗೆ ಬಂದಾಗ ನಡೆದ ಅದ್ಭುತ ಸ್ವಾಗತ ಸಮಾರಂಭದ ಜ್ಞಾಪಕಾರ್ಥ ನಗರಪಿತೃ ಮೇಯರುರು ಅವರಿಗೆ ಒಂದು ಭುಗಾರದ ಪದಕವನ್ನು ಅರ್ಪಿಸಿದರು. 27 ಮೈಲಿ ಉದ್ದಗಲ್ಕೂ 75 ಲಕ್ಷ ಜನರು ಮೇಯರ್‌ರನ್ನು ನೋಡಲು ನಿಂತಿದ್ದರು

ರಣಜಿತ್ ಜನಸಂದಣಿ 2 ನೇ ವಾರ

ರಾಜರಾಣಿ Raj Rani

ಕೆಸರ್ವಾಣಿ, ಮಿನಾ, ಸೋಹಿಲ್, ಉಷಾ ಕಿರಣ್ ಶಶಿಕಲಾ, ಕಳ್ಳು ನಟಿಸಿರುವ

ಮನಮೋಹಕ ಸಂಗೀತ ನೃತ್ಯಗಳಿಂದ ಕೂಡಿದ ಸಾಮಾಜಿಕ ಒಂದಿ ಚಿತ್ರ

ಪ್ರತಿ ದಿನ 3 ಆಟಗಳು

Announcement

Theatre building old materials and furniture are being sold very cheap.

Apply to—

NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—

ನ್ಯೂ ಒಪೇರಾ ಟಾಕೀಸ್
ಮೈಸೂರು

ಉಡ್‌ಲಾಂಡ್ಸ್ ಜನಭರಿತ 2 ನೇ ವಾರ

ಉಮ್ಮರ್‌ಖಯ್ಯಾಂರವರ ಅತ್ಯದ್ಭುತ ಸಾಹಸ ಹಿಂದಿ ಚಿತ್ರ

ಉಸ್ತಾದ್ ಪೆಡ್ರೊ

ಪಾತ್ರ— ಬೇಗಂ ಪಾರ, ಶಮ್ಮಿ, ಸಪ್ರು, ಷೇಕ್ ಮುಕ್ತಾರ್

USTAD PEDRO

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 15-6-51 ರಿಂದ — 10-30 ಕ್ಕೆ

Darkest Africa ಡಾರ್ಕೆಸ್ಟ್ ಆಫ್ರಿಕ

ರೋಮಾಂಚಕ ಇಂಗ್ಲೀಷ್ ಚಿತ್ರ

"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Edited, Printed and Published by M. S. Krishna Rao, at the Satyavadi Press Chamarajapuram Mysore